ಸ್ಟಾರ್ಟ್‌ಅಪ್‌ಗಳ ಆಗರ ಬೆಂಗಳೂರಿನಲ್ಲಿ ಎರಡು ವರ್ಷಗಳ ಹಿಂದೆ ಶುರುವಾದ 'ಸರ್ವಂ ಎಐ', ಜಾಗತಿಕ ಎಐ ಸ್ಪರ್ಧಿಗಳಿಗೆ ಸೆಡ್ಡು ಹೊಡೆಯುತ್ತಿದೆ. ಪ್ರಾದೇಶಿಕ ಭಾಷೆಗಳ ವರ್ಡ್ ಅಕ್ಯುರೆನ್ಸಿ ಪರೀಕ್ಷೆಯಲ್ಲಿ ಇತರ ಎಐಗಳನ್ನು ಹಿಂದಿಕ್ಕಿ ಗಮನಸೆಳೆದಿದೆ.




# 'ಸರ್ವಂ ಎಐ'ಮಯಂ

■ **ಶಶಿಕುಮಾರ್ ಸಿ.**

ಸುಧಾರಿತ ಕೃತಕ ಬುದ್ಧಿಮತ್ತೆ (ಎಐ), ಟೆಕ್ ಲೋಕದ ಹೊಸ ಸಂಚಲನ. 'ಸರ್ವಂ ಎಐಮಯಂ' ಎನ್ನುವಂತಾಗಿರುವ ಈ ಹೊತ್ತಿನಲ್ಲಿ 'ಸರ್ವಂ ಎಐ' ಹೆಸರಿನ ದೇಸಿ ಕಂಪನಿಯೊಂದು ಟೆಕ್ ಲೋಕದ ಗಮನಸೆಳೆಯುತ್ತಿದೆ. ಪ್ರಾದೇಶಿಕ ಭಾಷೆಗಳ ವರ್ಡ್ ಅಕ್ಯುರೆನ್ಸಿ ಪರೀಕ್ಷೆಯಲ್ಲಿ, ಇನ್ನಿತರ ಎಐ ಕಂಪನಿಗಳ ಸಾಮರ್ಥ್ಯವನ್ನು ಹಿಂದಿಕ್ಕಿ ಎಲ್ಲರ ಹುಬ್ಬೇರುವಂತೆ ಮಾಡಿದೆ.

ಭಾರತದ ಎಐ ಲೋಕವನ್ನೀಗ 'ಸರ್ವಂ ಎಐ' ಆವರಿಸಿಕೊಂಡಿದೆ. ಸರ್ವಂ ಎಐ ವೆಬ್‌ಸೈಟ್ ಮತ್ತು ಎಪಿಐ (API–ಡೆವಲಪರ್‌ಗಳಿಗಾಗಿ) ಮೂಲಕ ಲಭ್ಯವಿರುವ ಹಾಗೂ ಕೇಂದ್ರ ಸರ್ಕಾರವೇ ಆಸರೆಯಾಗಿರುವ ದೇಸಿ ಎಐ ಕಂಪನಿಯಾಗಿದೆ. **sarvam.ai** ಇದರ ಅಧಿಕೃತ ವೆಬ್‌ಸೈಟ್. ಬೆಂಗಳೂರು ಮೂಲದ ಈ ಕಂಪನಿ ಸ್ಥಾಪಿಸಿದವರು ವಿವೇಕ್ ರಾಘವನ್ ಮತ್ತು ಪ್ರತ್ಯುಷ್ ಕುಮಾರ್. ಇವರಿಗೆ ಈ ಹಿಂದೆ ಕೇಂದ್ರ ಸರ್ಕಾರದ 'ಭಾಷಿಣಿ' (Bhashini) ಯೋಜನೆಯಲ್ಲಿ ಕೆಲಸ ಮಾಡಿದ ಅನುಭವವಿದ್ದು, ಭಾರತೀಯ ಭಾಷೆಗಳಿಗಾಗಿಯೇ ವಿಶೇಷವಾದ ಕೃತಕ ಬುದ್ಧಿಮತ್ತೆ ಮಾದರಿಗಳನ್ನು (AI Models) ಅಭಿವೃದ್ಧಿಪಡಿಸುವುದು ಇವರ ಮುಖ್ಯ ಉದ್ದೇಶ. ಖಾಸಗಿ ಸಂಸ್ಥೆಯಾಗಿದ್ದರೂ, ಭಾರತದ ಜನಸಾಮಾನ್ಯರಿಗೆ ಅನುಕೂಲವಾಗುವಂತೆ ತಂತ್ರಜ್ಞಾನ ರೂಪಿಸುವುದನ್ನು ಕಂಪನಿ ತನ್ನ ಧ್ಯೇಯವಾಗಿಸಿಕೊಂಡಿದೆ.

ಕನ್ನಡ ಸೇರಿದಂತೆ ಇತರ ಪ್ರಾದೇಶಿಕ ಭಾಷೆಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ಜಿದ್ದಿಗೆ ಬಿದ್ದಿರುವ ಸರ್ವಂ ಎಐ ತಂಡವು ಭಾರತೀಯ ಮಾರುಕಟ್ಟೆಗೆ ಹೊಂದುವಂತಹ, ಕಡಿಮೆ ಖರ್ಚಿನ ಎಐ ಮಾದರಿಗಳನ್ನು ಸಿದ್ಧಪಡಿಸುತ್ತಿದೆ. ಕೇಂದ್ರ ಸರ್ಕಾರದ 'ಎಐ ಫಾರ್ ಇಂಡಿಯಾ' ಆಶಯಕ್ಕೆ ಅನುಗುಣವಾಗಿ ದೃಷ್ಟಿಹರಿಸಿದೆ. ಭವಿಷ್ಯದಲ್ಲಿ ಸರ್ಕಾರದ ವಿವಿಧ ಯೋಜನೆಗಳಿಗೆ ತಾಂತ್ರಿಕ ಬೆಂಬಲ ಒದಗಿಸುವ ಸಾಧ್ಯತೆಯಿದೆ. ಪ್ರಾದೇಶಿಕ ಭಾಷೆಗಳ ಮೇಲೆ ಗಮನ ಹರಿಸುತ್ತಿರುವ ಕಾರಣಕ್ಕೆ ಇದನ್ನು 'ಭಾರತೀಯ ಭಾಷಾ ಕೇಂದ್ರಿತ ಎಐ ಪರಿಹಾರ'ವಾಗಿ ಎಲ್ಲರೂ ನೋಡುತ್ತಿದ್ದಾರೆ.

ಹಾಗಿದ್ದರೆ, ಸರ್ವಂ ಎಐನಲ್ಲಿ ಏನೆಲ್ಲ ಮಾಡಬಹುದು ಎಂಬುದನ್ನು ಇಲ್ಲಿ ತಿಳಿಯೋಣ.

**ಟೆಕ್ಸ್ಟ್ ಟು ಸ್ಪೀಚ್:** ಭಾರತೀಯ ಪ್ರಾದೇಶಿಕ ಭಾಷೆಗಳಿಗೆ ನೆರವಾಗಲು ಸರ್ವಂ ಎಐ, ಟೆಕ್ಸ್ಟ್ ಟು ಸ್ಪೀಚ್ ಎನ್ನುವ ಅತ್ಯಾಧುನಿಕ ಧ್ವನಿ ತಂತ್ರಜ್ಞಾನ ಅಭಿವೃದ್ಧಿ ಮಾಡಿದೆ. ಇದು, ಲಭ್ಯವಿರುವ




ಭಾಷೆಗಳಲ್ಲಿ ಪಠ್ಯವನ್ನು ನಮೂದಿಸಿದರೆ, ಅದನ್ನು ಧ್ವನಿಯಾಗಿ ಪರಿವರ್ತಿಸುತ್ತದೆ. ಮಹಿಳಾ ಮತ್ತು ಪುರುಷ ಧ್ವನಿಗಳಲ್ಲಿ ಈ ಸೇವೆ ಇದ್ದು, ಧ್ವನಿಯು ನೈಜತೆಯಿಂದ ಕೂಡಿದೆ. ಕನ್ವರ್ಸೇಷನಲ್, ಆಡಿಯೊ ಬುಕ್ಸ್, ಎಂಟರ್‌ಟೈನ್‌ಮೆಂಟ್, ಸೇಲ್ಸ್ ಹಾಗೂ ನ್ಯೂಸ್ ಮಾದರಿಯಲ್ಲಿ ಧ್ವನಿಯು ಲಭ್ಯ.

**ಸ್ಪೀಚ್ ಟು ಟೆಕ್ಸ್ಟ್:** ಟೆಕ್ಸ್ಟ್ ಟು ಸ್ಪೀಚ್ ಧ್ವನಿ ತಂತ್ರಜ್ಞಾನದಂತೆಯೇ ಇದು 'ಸ್ಪೀಚ್ ಟು ಟೆಕ್ಸ್ಟ್' ಸೇವೆ ಒದಗಿಸುತ್ತದೆ. ಅಂದರೆ, ನೀವು ಮಾತಿನಲ್ಲಿ ಹೇಳಿದ್ದನ್ನು ಆಲಿಸುವ ಅಥವಾ ನೀವು ಒದಗಿಸುವ ಆಡಿಯೊ ಫೈಲ್‌ಗಳಲ್ಲಿನ ಧ್ವನಿಯನ್ನು ಪತ್ತೆ ಹಚ್ಚಿ ಅದನ್ನು ಪಠ್ಯದ ರೂಪದಲ್ಲಿ ಒದಗಿಸುವ ಕೆಲಸ ಮಾಡುತ್ತದೆ.

**ವಿಷನ್:** ಈ ಮಾದರಿಯಡಿ, ಅಪ್‌ಲೋಡ್ ಮಾಡುವ ಇಮೇಜ್‌ಗಳು ಅಥವಾ ಡಿಜಿಟಲ್ ಡಾಕ್ಯುಮೆಂಟ್‌ಗಳನ್ನು ಪರಾಮರ್ಶೆ ಮಾಡುವ ಸರ್ವಂ ಎಐ ಅದರಲ್ಲಿನ ಸಾರಾಂಶ ಅಥವಾ ಯಥಾ ಮಾಹಿತಿಯನ್ನು ಟೆಕ್ಸ್ಟ್ ಆಗಿ ಪರಿವರ್ತಿಸುತ್ತದೆ. ವಿಷನ್ ಆಯ್ಕೆ ಬಳಸಿಕೊಂಡು ಟೇಬಲ್‌ಗಳನ್ನು ಟೆಕ್ಸ್ಟ್ ರೂಪದಲ್ಲಿ ಎಕ್ಸ್‌ಟ್ರಾಕ್ಟ್ ಮಾಡಬಹುದು. ಚಿತ್ರವನ್ನು ಒದಗಿಸಿ, ಆ ಚಿತ್ರ ಏನನ್ನು ತೋರುತ್ತದೆ ಎಂಬುದರ ಸಾರಾಂಶವನ್ನು ಪಠ್ಯದ ರೂಪದಲ್ಲಿ ಪಡೆಯಬಹುದು. ಪಠ್ಯ ಒಳಗೊಂಡ ಚಿತ್ರವನ್ನು ಅಪ್‌ಲೋಡ್ ಮಾಡಿ ಅದರಲ್ಲಿನ ಪಠ್ಯವನ್ನು ಸಾಫ್ಟ್ ಕಾಪಿಯಾಗಿ ತಕ್ಷಣವೇ ಪಡೆಯಬಹುದು.

**ಅನುವಾದ:** ಇಂಗ್ಲಿಷ್ ಸೇರಿದಂತೆ ಕನ್ನಡ, ಬೆಂಗಾಲಿ, ಗುಜರಾತಿ, ಮಲಯಾಳಂ ಅನುವಾದ ಸೇವೆ ಕಲ್ಪಿಸುತ್ತದೆ. ಇಲ್ಲಿ ತಿಳಿಸಿರುವ ಭಾಷೆಗಳ ಪೈಕಿ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ತಕ್ಷಣವೇ ಅನುವಾದ ಮಾಡಬಹುದಾಗಿದೆ. ಭಾರತದಲ್ಲಿ ಬಳಕೆಯಲ್ಲಿರುವ ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ ಈ ಸೇವೆಯನ್ನು ಕಲ್ಪಿಸಲು ಕಂಪನಿಯು ತೊಡಗಿದೆ.

**ಎಪಿಐ ಕೀ:** ಎಪಿಐ ಕೀ (API Key) ಎನ್ನುವುದು ಸಾಫ್ಟ್‌ವೇರ್ ಅಥವಾ ವೆಬ್‌ಸೈಟ್‌ಗೆ ಪ್ರವೇಶಿಸಲು ಬೇಕಾದ ಡಿಜಿಟಲ್ ಪಾಸ್‌ವರ್ಡ್ ಅಥವಾ ಗುರುತಿನ ಚೀಟಿ ಇದ್ದಂತೆ. ಸರ್ವಂ ಎಐನಂತಹ ತಂತ್ರಜ್ಞಾನ ಬಳಸುವಾಗ, ನಿಮ್ಮ ಅಧಿಕೃತತೆ ('ಇದು ನಾನೇ' ಎಂದು) ಬಗ್ಗೆ ಆ ಕಂಪನಿಗೆ ಖಾತರಿಪಡಿಸಲು ಬಳಸುವ ಕೀ ಆಗಿದೆ. ಇದು ನಿಮ್ಮ ಮನೆಯ ಬೀಗದ ಕೈ ಇದ್ದಂತೆ. ಇದನ್ನು ಯಾರಿಗೂ ಶೇರ್ ಮಾಡಬಾರದು. ಒಂದು ವೇಳೆ ಬೇರೆಯವರಿಗೆ ಈ ಕೀ ಸಿಕ್ಕರೆ, ಅವರು ನಿಮ್ಮ ಹೆಸರಿನಲ್ಲಿ ಆ ಸೇವೆಯನ್ನು ಬಳಸಿ ನಿಮ್ಮ ಹಣ ಅಥವಾ ಕೋಟಾವನ್ನು ಖಾಲಿ ಮಾಡಬಹುದು. ■